**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ ಇವರ ನಿಯಮ 330 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ:**

**ವಿಷಯ:-**

**ಈ ಹಿಂದೆ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿದ್ದ ಕುಡಿಯುವ ನೀರಿನ ಸರಬರಾಜು ಮತ್ತು ಬೋರ್‌ವೆಲ್‌ಗಳನ್ನು ಬಿ.ಬಿ.ಎಂ.ಪಿ ಯೇ ನಿರ್ವಹಿಸುತ್ತಿತ್ತು. ಗ್ರೇಟರ್ ಬೆಂಗಳೂರು ಅಥಾರಟಿ ಬಂದ ಮೇಲೆ ನಗರಕ್ಕೆ ನೀರು ಸರಬರಾಜು ಮಾಡುವ ಹೊಣೆಯನ್ನು ಬೆಂಗಳೂರು ಜಲಮಂಡಳಿಗೆ ಹಸ್ತಾಂತರಿಸಲಾಗಿದೆ. ಈ ಜಲಮಂಡಳಿಯಲ್ಲಿ ವಿಭಾಗಗಳು, ಉಪ ವಿಭಾಗಗಳನ್ನು ಒಳಗೊಂಡ ಇಂಜಿನಿಯರ್ / ಸಿಬ್ಬಂದಿಯು ಸಾಕಷ್ಟು ಸಂಖ್ಯೆಯಲ್ಲಿಲ್ಲ. ಬೋರ್‌ವೆಲ್ ದುರಸ್ತಿ, ನಿರ್ವಹಣೆ ಮಾಡುವುದು ಜಲಮಂಡಳಿಯ ಜವಾಬ್ದಾರಿಯಾಗಿದೆ. ನೀರು ಪೂರೈಕೆ ವಾಟರ್‌ಮ್ಯಾನ್ ನಿಯೋಜಿಸುವುದು ಜಿ.ಬಿ.ಎ ಹೊಣೆಯಾಗಿದೆ. ಈ ಎರಡು ಇಲಾಖೆಗಳು ಸಮರ್ಪಕವಾಗಿ ಜವಾಬ್ದಾರಿ ನಿರ್ವಹಿಸದ ಹಿನ್ನಲೆಯಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಹಲವಾರು ಬಡಾವಣೆಗಳಲ್ಲಿ ನೀರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿರುವ ಬಗ್ಗೆ.**

****

**ಉತ್ತರ:**

- ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ದಿನಾಂಕ: 31.03.2025 ರವರೆಗೂ ಈ ಹಿಂದಿನ ಬಿ.ಬಿ.ಎಂ.ಪಿ (ಹಾಲಿ ಜಿ.ಬಿ.ಎ) ವ್ಯಾಪ್ತಿಯ ಕೋರ್ ಹಾಗೂ ಸಿಎಂಸಿ ಪ್ರದೇಶಗಳಲ್ಲಿನ ಸಾರ್ವಜನಿಕ ಕೊಳವೆ ಬಾವಿಗಳನ್ನು ನಿರ್ವಹಣೆ ಮಾಡಲಾಗುತ್ತಿರುತ್ತದೆ.
- ದಿನಾಂಕ: 01.04.2025 ರಿಂದ ಈ ಹಿಂದಿನ ಬಿ.ಬಿ.ಎಂ.ಪಿ (ಹಾಲಿ ಜಿ.ಬಿ.ಎ) ವ್ಯಾಪ್ತಿಯ 110 ಹಳ್ಳಿಯ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ನೀರು ಸರಬರಾಜು ಮಾಡಲು ಜಿ.ಬಿ.ಎ ವತಿಯಿಂದ ಕೊರೆದಿರುವ ಕೊಳವೆ ಬಾವಿಗಳನ್ನು ಬೆಂಗಳೂರು ಜಲಮಂಡಳಿಗೆ ಹಸ್ತಾಂತರಿಸಿಕೊಂಡು ನಿರ್ವಹಣೆ ಮಾಡಲಾಗುತ್ತಿರುತ್ತದೆ.
- ಯಶವಂತಪುರದ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಕೆಳಕಂಡ ವಾರ್ಡ್‌ಗಳಲ್ಲಿ ಬೆಂಗಳೂರು ಜಲಮಂಡಳಿಯ ವತಿಯಿಂದ ಒಟ್ಟು 1300 ಕೊಳವೆ ಬಾವಿಗಳನ್ನು ನಿರ್ವಹಣೆ ಮಾಡಲಾಗುತ್ತಿರುತ್ತದೆ.

| ಕ್ರ. ಸಂ | ವಾರ್ಡ್ ಹೆಸರು | ಕಾರ್ಯ ನಿರ್ವಹಿಸುತ್ತಿರುವ ಕೊಳವೆ ಬಾವಿಗಳ ಸಂಖ್ಯೆ |
|---|---|---|
| 1. | ದೊಡ್ಡಬಿದರಕಲ್ಲು | 560 |
| 2. | ಹೇರೋಹಳ್ಳಿ | 206 |
| 3. | ಉಲ್ಲಾಳ | 300 |
| 4. | ಹೆಮ್ಮಿಗೆಪುರ | 235 |
| | **ಒಟ್ಟು** | **1300** |

- ಕೊಳವೆ ಬಾವಿಗಳನ್ನು ನಿರ್ವಹಣೆ ಮಾಡಲು ಪ್ರತ್ಯೇಕ ವಿಭಾಗ ಹಾಗೂ ಉಪವಿಭಾಗವಿದ್ದು, ಅದರಲ್ಲಿ ಒಬ್ಬರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಒಬ್ಬರು ಕಿರಿಯ ಅಭಿಯಂತರರು ಹಾಗೂ ಇಬ್ಬರು ಕಿರಿಯ ಅಭಿಯಂತರರು (ಆಪರೇಷನ್) ಕಾರ್ಯನಿರ್ವಹಿಸುತ್ತಿರುತ್ತಾರೆ.
- ಪ್ರಸ್ತುತ ಯಶವಂತಪುರದ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಜಲಮಂಡಳಿ ವತಿಯಿಂದ ನಿರ್ವಹಿಸುತ್ತಿರುವ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲು ನಿರ್ವಹಣಾ ವಲಯದ ಸೇವಾಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು 52 ವಾಲ್ಟ್‌ಮೆನ್‌ಗಳು ತಮ್ಮ ಕಾರ್ಯವ್ಯಾಪ್ತಿಯ ಕೊಳವೆ ಬಾವಿಗಳನ್ನು ಚಾಲನೆಗೊಳಿಸುವ, ಸ್ಥಗಿತಗೊಳಿಸುವ ಹಾಗೂ ನೀರು ಸರಬರಾಜು ಮಾಡುವ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ.

**ಸಂಖ್ಯೆ:** ನಅಇ 119 ಎಂಎನ್‌ಐ 2026(ಇ)

**(ಡಿ ಕೆ ಶಿವಕುಮಾರ್)**
**ಉಪ ಮುಖ್ಯಮಂತ್ರಿ**